## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೊಸಪೇಟೆ

## ಸಿ.ಸಿ. ನಂ.701/2025

ಫಿರ್ಯಾಧಿದಾರರುಃ - ರಾಜ್ಯದ ಪರವಾಗಿ ಆರಕ್ಷಕ ನಿರೀಕ್ಷಕರು,
ಸಂಚಾರಿ ಪೊಲೀಸ್ ಠಾಣೆ, ಹೊಸಪೇಟೆ, ವಿಜಯನಗರ ಜಿಲ್ಲೆ.

ವಿರುದ್ಧ

| | |
|---|---|
| ಆಪಾಧಿತರು :- | ಎಸ್. ಮಣಿವಣ್ಣನ್ ತಂದೆ ಸುಬ್ರಮಣ್ಯಂ,<br>ವಯಸ್ಸುಃ 52 ವರ್ಷ, ಉಃ ಚಾಲಕ,<br>ವಾಸಃ ನಂ.31, ನಲ್ಲತಂಬಿ, ಗೌಂಡರ್ ಸ್ಟ್ರೀಟ್, ತಾರಾ ನಲ್ಲೂರು ಉತ್ತರ, ತಿರುಚಿರಪಲ್ಲಿ ತಾಲೂಕು ಮತ್ತು ಜಿಲ್ಲೆ, ತಮಿಳುನಾಡು ರಾಜ್ಯ. |

## ಃ ಆಪಾದನೆ ಃ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಪೇಟೆ ಆದ ಶ್ರೀಮತಿ ಚೈತ್ರಾ .ಜೆ, ಬಿ.ಬಿ.ಎ., ಎಲ್.ಎಲ್.ಬಿ., (Hons) ನಿಮ್ಮ ಮೇಲೆ ಮಾಡುವ ಆಪಾದನೆಯ ಸಾರಾಂಶವೇನೆಂದರೆ.

ದಿನಾಂಕ 04.03.2025 ರಂದು ರಾತ್ರಿ 08.10 ಗಂಟೆ ಸುಮಾರಿಗೆ ಸಂಚಾರಿ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದ ಮರಿಯಮ್ಮನಹಳ್ಳಿ ಕಡೆಯಿಂದ ಹೊಸಪೇಟೆ ಕಡೆಗೆ ಟೆನಲ್ ಒಳಗೆ ಎನ್.ಹೆಚ್.-50 ರಸ್ತೆಯಲ್ಲಿ ಚಾಸಾ-1 ರವರ ಮಗನಾದ ಮೃತ ಹೆಚ್.ಎಂ. ಕೊಟ್ರೇಶ ಇವರು ತಮ್ಮ ಮೋಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-35/ಇಡಿ-0060 ನ್ನು ಚಲಾಯಿಸಿಕೊಂಡು ಹೋಗುತ್ತಿರುವಾಗ, ಹಿಂದುಗಡೆಯಿಂದ ಆರೋಪಿಯಾದ ನೀವು ಲಾರಿ ನೊಂದಣಿ ಸಂಖ್ಯೆ ಟಿಎನ್-52/ಡಿ-1677 ನ್ನು ಅತೀ ವೇಗ ಮತ್ತು ಅಜಾಗರೂತಕತೆಯಿಂದ ಚಲಾಯಿಸಿಕೊಂಡು ಬಂದು ಮೃತ ಹೆಚ್.ಎಂ. ಕೊಟ್ರೇಶ ಇವರು ಹೋಗುತ್ತಿರುವ ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದಿರುತ್ತೀರಿ ಎಂದು, ಈ ಮೂಲಕ ಭಾ.ನ್ಯಾಸಂ. ಕಲಂ 281 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

2. ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಲಾರಿ ನೊಂದಣಿ ಸಂಖ್ಯೆ ಟಿಎನ್-52/ಡಿ-1677 ನ್ನು ಮರಿಯಮ್ಮನಹಳ್ಳಿ ಕಡೆಯಿಂದ ಎನ್.ಹೆಚ್.-50 ರಸ್ತೆಯಲ್ಲಿ ಹೊಸಪೇಟೆ ಕಡೆಗೆ ಅತೀ ವೇಗ ಮತ್ತು ಅಜಾಗರೂಕತಯಿಂದ ಚಲಾಯಿಸಿಕೊಂಡು ಹೋಗಿ, ನಿಮ್ಮ ಲಾರಿಯ ಬಲಗಡೆಯ ಬಾಡಿಯಿಂದ ನಿಮ್ಮ ಎದುರಿಗೆ ಹೋಗುತ್ತಿದ್ದ ಮೃತ ಹೆಚ್.ಎಂ.ಕೊಟ್ರೇಶ ಇವರು ಚಲಾಯಿಸುತ್ತಿದ್ದ ಮೊಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-35/ಇಡಿ-0060 ಕ್ಕೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದರಿಂದ ಹೆಚ್.ಎಂ.ಕೊಟ್ರೇಶ್ ರವರ ಕಿವಿ, ಮೂಗು ಮತ್ತು ಬಾಯಿಯಿಂದ ರಕ್ತ ಬಂದು, ಬಲಕೈಗೆ ಬಾರಿ ಒಳಪೆಟ್ಟಾಗಿ, ಬಲಕಿವಿಗೆ ಹರಿದ ರಕ್ತಗಾಯವಾಗಿ, ಬಲಮೋಣಕಾಲು ಕೆಳಗೆ ತೆರೆಚಿದ ರಕ್ತ ಗಾಯವಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದು, ಆ ವ್ಯಕ್ತಿಯ ಮರಣಕ್ಕೆ ಕಾರಣ ಆಗಿರುತ್ತೀರಿ ಹಾಗೂ ಸದರಿ ಅಪಘಾತ ಕುರಿತು ಸಮೀಪದ ಪೊಲೀಸ್ ಠಾಣೆಗೆ ಅಥವಾ ದಂಡಾಧಿಕಾರಿಗೆ ತಿಳಿಸದೇ ಸ್ಥಳದಿಂದ ಪರಾರಿಯಾಗಿದ್ದು, ಈ ಮೂಲಕ ಭಾ.ನ್ಯಾಸಂ. ಕಲಂ 106(1) ರಡಿಯಲ್ಲಿ ಶಿಕ್ಷಾರ್ಹ ಎಸಗಿರುತ್ತೀರೆಂದು ಆಪಾ ದನೆ ಮಾಡುತ್ತಿದ್ದೇನೆ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಲಾರಿ ನೊಂದಣಿ ಸಂಖ್ಯೆ ಟಿಎನ್-52/ಡಿ-1677 ನೇದ್ದನ್ನು ನಿಗದಿತ ವೇಗವನ್ನು ಮೀರಿ ಅತೀ ವೇಗವಾಗಿ ಚಲಾಯಿಸಿದ್ದು, ಆ ಮೂಲಕ ಕಲಂ 183 ಐಎಂವಿ ಕಾಯ್ದೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಲಾರಿ ನೊಂದಣಿ ಸಂಖ್ಯೆ ಟಿಎನ್-52/ಡಿ-1677 ನೇದ್ದನ್ನು ಚಲಾಯಿಸಿಕೊಂಡು ಹೋಗಿ ಮೋಟಾರ ಸೈಕಲ್‌ಗೆ ಡಿಕ್ಕಿ ಹೊಡೆದು ಅಪಘಾತಪಡಿಸಿದ ನಂತರ ಅಪಘಾತವಾದ ಬಗ್ಗೆ ಹತ್ತಿರದ ಪೋಲಿಸ್ ಠಾಣೆಗೆ ಮಾಹಿತಿ ತಿಳಿಸದೇ ಹಾಗೂ ಗಾಯಾಳುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸದೇ ವಾಹನ ಸಮೇತ ಓಡಿ ಹೋಗಿದ್ದು, ಈ ಮೂಲಕ ಕಲಂ 187 ಐಎಂವಿ ಕಾಯ್ದೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದನೆ ಮಾಡುತ್ತಿದ್ದೇನೆ.

ಮೇಲ್ಕಂಡ ಆರೋಪಗಳನ್ನು ಆರೋಪಿಯಾದ ನೀವು ಈ ನ್ಯಾಯಲಯದ ವಿಚಾರಣಾ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ಸದರಿ ಆರೋಪಗಳಿಗೆ ನನ್ನ ಮುಂದೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸುತ್ತೀದ್ದೇನೆ.

ಪ್ರಶ್ನೆ - 1. ನೀವು ಮೇಲೆ ಹೇಳಿರುವ ಆಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರ-

ಪ್ರಶ್ನೆ - 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ನಿಮ್ಮ ಪರವಾಗಿ ಪ್ರತಿರಕ್ಷಣೆ ಇದೆಯಾ?

ಉತ್ತರ-

(ದಿನಾಂಕಃ ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ, ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಪೇಟೆ.